**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.66/2025**

| | | |
|---|---|---|
| ಸಾಕ್ಷಿದಾರರ ಹೆಸರು | ಹರ್ಷವರ್ದನ್ ಹೆಚ್.ಕೆ | ಸಿ.ಡಬ್ಲ್ಯೂ: 1 ಪಿ.ಡಬ್ಲ್ಯೂ:1 |
| ತಂದೆಯ ಹೆಸರು | ಕ್ಷೇತ್ರ ಪಾಲೇಗೌಡ | |
| ವಯಸ್ಸು | 33 ವರ್ಷ | |
| ಉದ್ಯೋಗ | ಪಿ.ಎಸ್.ಐ ಗೋಣಿಬೀಡು ಪೊಲೀಸ್ ಠಾಣೆ | |
| ವಾಸ ಸ್ಥಳ | ಗೋಣೀಬೀಡು | |

ದಿನಾಂಕ: 08.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು ದಿ: 16.06.2023 ರಿಂದ ಇಂದಿನವರೆಗೂ ನಾನು ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 25.11.2024 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನಾನು ಜನ್ನಾಪುರ ಗ್ರಾಮದಲ್ಲಿ ನಮ್ಮ ಠಾಣಾ ಸಿಬ್ಬಂಧಿಗಳಾದ ಚಾಸಾ.2 ರಿಂದ 5 ರವರ ಜೊತೆ ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ ಅಂತೂರು ಗ್ರಾಮದ ನಾಗೇಶ ಮೂರ್ತಿ ರವರು ತಮ್ಮ ಮನೆಯ ಮುಂಭಾಗದಲ್ಲಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ದೂರವಾಣಿ ಕರೆ ಬಂದಿದ್ದು, ಖಚಿತ ಮಾಹಿತಿಯ ಮೇರೆಗೆ ಸದರಿ ಪ್ರಕರಣದಲ್ಲಿ ಶೋದನಾ ವಾರೆಂಟ್ ಪಡೆಯಲು ಸಾಕಷ್ಟು ಕಾಲವಕಾಶ ಇಲ್ಲದ ಕಾರಣ ಅಭಕಾರಿ ಕಾಯ್ದೆ 54 ರಡಿಯಲ್ಲಿ ಶೋದನಾ ಸಮುಚಿತ ಆಧಾರ ತಯಾರಿಸಿ ಸೂಕ್ತ ಸಲಹಕರಣದೊಂದಿಗೆ ಹಂತೂರು ಗ್ರಾಮಕ್ಕೆ ಸಂಜೆ 5.30 ಕ್ಕೆ ಹೋಗಿದ್ದು ಅಲ್ಲಿ ರಸ್ತೆಯ ಬಳಿ ಸಿಕ್ಕ ಚಾಸಾ.6 ಮತ್ತು 7 ರವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ತಿಳಿಸಿ ಈ ಪ್ರಕರಣದಲ್ಲಿ ಪಂಚಾರಾಗಿ ಸಹಕರಿಸುವಂತೆ ಕೋರಿ ಅವರು ಒಪ್ಪಿದ ಮೇರೆಗೆ ಅವರಿಗೆ ನೋಟೀಸು ನೀಡಿ ಅವರನ್ನು ಕರೆದುಕೊಂಡು 1ನೇ ಆರೋಪಿಯ ಮನೆಯ ಬಳಿ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿ ಪಿಂಕ್ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು

ಇಟ್ಟುಕೊಂಡು ಮಾರಾಟ ಮಾಡುತ್ತಿದುದ್ದ ಕಂಡು ಬಂದಿದ್ದು, ಪಂಚರ ಸಮಕ್ಷಮ ದಾಳಿ ಮಾಡಿದಾಗ ಆ ವ್ಯಕ್ತಿ ಚೀಲವನ್ನು ಬಿಟ್ಟು ಓಡಿ ಹೋಗಲು ಯತ್ನಿಸಿದಾಗ ನನ್ನ ಸಿಬ್ಬಂಧಿಗಳ ಸಹಾಯದಿಂದ ಅವನನ್ನು ಹಿಡಿದು ವಿಚಾರಣೆ ಮಾಡಲಾಗಿ ಆರೋಪಿ ತನ್ನ ಹೆಸರು ನಾಗೇಶ್ ಮೂರ್ತಿ ಬಿನ್ ಪರಮೇಶ್ ಗೌಡ ಎಂದು ತಿಳಿಸಿರುತ್ತಾರೆ.

3. ನಂತರ ಅಲ್ಲಿಯೇ ಇದ್ದ ಪಿಂಕ್ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿ ನೋಡಿದಾಗ D.K. Double Kick Fine Whiskey ಕಂಪನಿಯ ಹೆಸರಿನ 90 ಎಂ.ಎಲ್ ನ ಒಟ್ಟು 45 ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿರುತ್ತವೆ. ಆರೋಪಿಯ ಬಳಿ ಸದರಿ ಮದ್ಯವನ್ನು ಇಟ್ಟುಕೊಳ್ಳಲು ಪರವಾನಿಗೆ ಇದೆಯಾ ಎಂದು ವಿಚಾರಿಸಲಾಗಿ ಆರೋಪಿಯು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿಯೇ ವರದಿಯನ್ನು ತಯಾರಿಸಿ ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿ ಇದ್ದ ಚಾಸಾ.14 ಪ್ರಕರಣ ದಾಖಲಿಸಿ ಸೂಚಿಸಿದ್ದು ಸದರಿ ವರದಿಯನ್ನು ಚಾಸಾ.4 ರವರ ಹಸ್ತಾ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಪ್ರಕರಣ ದಾಖಲಾದ ಬಗ್ಗೆ ಚಾಸಾ.14 ರವರು ಪ್ರಕರಣ ದಾಖಲು ಮಾಡಿದ ಬಗ್ಗೆ ನನಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ತಕ್ಷೀರು ಸ್ಥಳದಲ್ಲಿ ಮಹಜರ್ ಕ್ರಮವನ್ನು ಸಂಜೆ 7.00 ರಿಂದ 8.00 ಗಂಟೆ ವರೆಗೆ ಮಹಜರ್ ನ್ನು ಜರುಗಿಸಿರುತ್ತೇನೆ. ಸ್ಥಳದಲ್ಲಿಯೇ ಕರಡು ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಆರೋಪಿಯ ವಶದಿಂದ ಪಡೆದಿರುವ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಅದೇ ಪಿಂಕ್ ಚೀಲದಲ್ಲಿ ಹಾಕಿ 'ಪಿ' ಎಂಬ ಅರಗು ಸೀಲು ಹಾಕಿ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮಹಜರ್ ಕಾಲದಲ್ಲಿ ಛಾಯಚಿತ್ರವನ್ನು ತೆಗೆಸಿರುತ್ತೇನೆ. ಆರೋಪಿ ಮತ್ತು ಮಾಲುಗಳೊಂದಿಗೆ ಠಾಣೆಗೆ ವಾಪಸ್ಸು ಬಂದು ಆರೋಪಿಗೆ ತನಿಖೆಗೆ ಸಹಕರಿಸುವಂತೆ ಸೂಚಿಸಿ ನೋಟೀಸು ನೀಡಿರುತ್ತೇನೆ. ವಶಕ್ಕೆ ಪಡೆದುಕೊಂಡ ಮಾಲುಗಳನ್ನು ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ 104/2025 ರಂತೆ ನಮೂದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ.5

ರವರಿಂದ ಛಾಯಚಿತ್ರ ಮತ್ತು ವಿಡಿಯೋದ ಸಿ.ಡಿ ಮಾಡಿದ ಬಗ್ಗೆ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.15 ರವರಿಗೆ ವರ್ಗಾಯಿಸಿರುತ್ತೇನೆ.

4. ಶೋದನಾ ಸಮುಚಿತ ಆಧಾರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಮತ್ತು ಕರಡು ನಕ್ಷೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಛಾಯಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು, ಪಂಚರುದಾರರಿಗೆ ನೀಡಿದ ನೋಟೀಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು, ಚಾಸಾ.5 ರವರಿಂದ ದೃಢೀಕರಣ ಪತ್ರವನ್ನು ಪಡೆದುಕೊಂಡಿರುವ ಬಗ್ಗೆ ಪತ್ರವನ್ನು ಹಾಜರು ಮಾಡಿದ್ದು ಸದರಿ ದಾಖಲೆಯನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು, ಸಿ.ಡಿ ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.8 ಎಂದು ಗುರುತಿಸಲಾಯಿತು.

5. 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ. D.K. Double Kick Fine Whiskey ಯ 90 ಎಂ.ಎಲ್ ನ ಒಟ್ಟು 45 ಖಾಲಿ ಟೆಟ್ರಾ ಪ್ಯಾಕ್ ಗಳನ್ನು ಸಾಕ್ಷಿಯು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಮು.ಮಾ.1 ಎಂದು ಗುರುತಿಸಲಾಯಿತು, ಪಿಂಕ್ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಸಾಕ್ಷಿಯು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಮು.ಮಾ.2 ಎಂದು ಗುರುತಿಸಲಾಯಿತು, ಚೀಲದಲ್ಲಿ ಅಂಟಿಸಿರುವ ಚೀಟಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಹಿಯನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಡಿ.ಕೆ.ಪಿ ವಕೀಲರಿಂದ – ಆರೋಪಿತರ ಪರವಾಗಿ</u>

6. ಗೋಣಿಬೀಡು ಠಾಣೆಯಿಂದ ತಕ್ಷೀರು ಸ್ಥಳಕ್ಕೆ ಸುಮಾರು 12 ಕಿ.ಮೀ ಅಂತರ ಇರುತ್ತದೆ. ವಾಹನದಲ್ಲಿ ಠಾಣೆಯಿಂದ ತಕ್ಷೀರು ಸ್ಥಳಕ್ಕೆ ಹೋಗಲು ಅರ್ಧ ಗಂಟೆ ಆಗುತ್ತದೆ. ಮಾಹಿತಿ ಸಂಜೆ 5 ಗಂಟೆಗೆ ಬಂದಿತ್ತು. ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಲು 5 ನಿಮಿಷ ಆಗಿತ್ತು. ಪ್ರಕರಣ ದಾಖಲು ಆದ ಬಳಿಕ ಮಹಜರ್ ಮಾಡಿದ್ದೇನೆ. ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ 3 ರಿಂದ 4 ಜನ ಸಾರ್ವಜನಿಕರು ಇದ್ದರು. ಸಾರ್ವಜನಿಕರಿಂದ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಆರೋಪಿಯ ಮನೆ ಯಾವ ದಿಕ್ಕಿನಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ಮುದ್ದೆ ಮಾಲುಗಳು ಆರೋಪಿಯ ಮನೆಯ ಯಾವ ದಿಕ್ಕಿನಲ್ಲಿ ಇದ್ದವು ಎಂದು ನೆನಪಿಲ್ಲ. ಚಾಸಾ.6 ಮತ್ತು 7 ರವರಿಗೆ ನಾನು ಯಾವುದೇ ನೋಟೀಸು ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಅಭಕಾರಿ ದಾಳಿ ಮಾಡಲು ಹೋದಾಗ ಖಾಲಿ ಟೆಟ್ರಾ ಪ್ಯಾಕ್ ಗಳು ಸಿಗುತ್ತವೆ ಎಂದರೆ ಸರಿಯಲ್ಲ. ಆ ರೀತಿ ಖಾಲಿ ಟೆಟ್ರಾ ಪ್ಯಾಕ್ ಗಳನ್ನು ವಶಕ್ಕೆ ಪಡೆದು ಈ ಕೇಸಿನಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಟೆಟ್ರಾ ಪ್ಯಾಕ್ ಗಳ ಮೇಲೆ ಯಾವ ಕಂಪನಿಯಿಂದ ತಯಾರಿಸಲಾಗಿದೆ ಎಂದು ಬರೆದಿಲ್ಲ, ಸಿರಿಯಲ್ ಸಂಖ್ಯೆಯನ್ನು ಮಾತ್ರ ಬರೆದಿರುತ್ತಾರೆ. ಮಹಜರ್ ಅನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಛಾಯಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

7. ನಾನು ಆ ದಿನ ಯಾವುದೇ ದಾಳಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಛಾಯಚಿತ್ರಗಳನ್ನು ಮೊಬೈಲ್ ನಲ್ಲಿ ತೆಗೆದಿದ್ದೆ. ಛಾಯಚಿತ್ರಗಳ ಮೇಲೆ ದಿನಾಂಕ ಮತ್ತು ಸಮಯ ಕಂಡು ಬರುವುದಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ